ಅಲ್ಲದೆ ಅವರುಗಳಿಗೆ ಸಕಾಲಕ್ಕೆ ಮನೆಗಳು ಸಿಕ್ಕಿಲ್ಲ. ಆದ್ದರಿಂದ ಈ ಮನೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಟ್ಟಿಸಿ, ಹೆಚ್ಚಿರುವ ಮನೆಗಳ ವೆಚ್ಚವನ್ನು ಕಡಿಮೆ ಮಾಡಿ ಈ ಮನೆಗಳನ್ನು ಉದ್ದೇಶಿತ ಮಧ್ಯಮ ವರ್ಗ, ಅಲ್ಪ ವರಮಾನದ ವರ್ಗ ಮತ್ತು ಕನಿಷ್ಟ ವರಮಾನದ ವರ್ಗದವರಿಗೆ ಕೊಡಿಸಿಕೊಡಬೇಕೆಂದೂ, ಈ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಮನೆಗಳನ್ನು ಪೂರ್ಣ ಆಗದೆ ಯಾರಿಗೂ ವಹಿಸಲಿಕ್ಕೆ ಆಗುವುದಿಲ್ಲ. ನೀರನ್ನು ಕೊಡತಕ್ಕದ್ದು, ವಿದ್ಯುಚ್ಛಕ್ತಿ ಕೊಡತಕ್ಕದ್ದು, ಇವೆರಡನ್ನೂ ಕರ್ನಾಟಕ ನೀರಾವರಿ ಸರಬರಾಜು ಮಂಡಳಿ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಪಾವತಿ ಮಾಡ ಬೇಕಾಗುತ್ತದೆ. ಈಗ ನಿಧಾನವಾಗಿರುವುದನ್ನು ನಾನು ಒಪ್ಪುವುದೇನೆ ಆದ್ದರಿಂದ, ಈ ಬಗ್ಗೆ ಜನರಿಗೆ ಹೆಚ್ಚಿನ ಕಂತುಗಳ ಮೂಲಕ ಹಣ ಕಟ್ಟಲಿಕ್ಕೆ ಅವಕಾಶ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ಪೂರಕವಾದ ವ್ಯವಸ್ಥೆ ನಿಧಾನವಾಗಿರುವ ಬಗ್ಗೆ ಆದೇಶ ಕೊಟ್ಟಿದ್ದೇನೆ. ಮೂರು ಸಾವಿರ ಮನೆಗಳನ್ನು ಹಂಚಬೇಕಾಗಿದೆ. ನಿರ್ದಿಷ್ಟ ಕಾಲಾವಧಿಯಲ್ಲಿ ಮನೆ ಕೊಡಬೇಕೆಂದು ತಿಳಿಸಿದ್ದೇವೆ.

(೧೨) ರಾಜ್ಯದ ಶಿಕ್ಷಕರ ಜಿಲ್ಲಾ ವರ್ಗಾವಣೆ

SMT. MUKHTARUNNISA.—The Karnataka St te inter district transfer of Primary School Teacher's Association is urging that the transfer of Primary Schools from one district to another. This is because of the fact that the services of the teachers put in the district, in which they are staying are being considered for promotion as Head Masters. They are also urging that the whole service has to be taken into account while considering for promotion. It is ascertained that the Govt. have not considered their request. I urge the Govt. to consider the entire service put in by the teachers for Promotion to the post of He d Master and retain in the same place, such of those who are to retire shortly.

ಶ್ರೀ ಡಿ. ಮಂಜುನಾಥ್.—ಈಗ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗ ಆದರೆ ಪ್ರೈಮರಿ ಸ್ಕೂಲಿನಲ್ಲಿರುವ ಉಪಾಧ್ಯಾಯರ ಸೀನಿಯಾರಿಟಿ ಕೆಳಗಡೆ ಹೋಗುತ್ತದೆ. ಪ್ರತಿಯೊಂದು ಜಿಲ್ಲೆಗೆ ಘಟಕ ಎಂದು ಮಾಡಿದ್ದೇವೆ. ಡಿ.ಎಲ್.ಆರ್.ಸಿ. ಮೂಲಕ ಈ ಜಿಲ್ಲೆಗೆ ಎಂದು ರೆಕ್ರೂಟ್‌ಮೆಂಟ್ ಮಾಡಿರುತ್ತೇವೆ. ನಿಯಮಾವಳಿಯ ಪ್ರಕಾರ ಹೋದರೆ ಅವರ ಸೀನಿಯಾರಿಟಿ ಕೆಳಗೆ ಹೋಗುತ್ತದೆ. ಈಗ ನಾವು ಪ್ರೈಮರಿ ಸ್ಕೂಲು ಟೀಚರ್ಸ್‌ಗೆ ಪ್ರೊಮೋಷನ್ ಕೊಡುತ್ತಿದ್ದೇನೆ. ಕೆಲವರು ವರ್ಗವಾಗಿ ಬೇರೆ ಜಿಲ್ಲೆಗಳಿಗೆ ಹೋಗಿದ್ದಾರೆ. ಈ ರೀತಿ ಬೇರೆ ಜಿಲ್ಲೆಗಳಿಗೆ ಹೋದವರಿಗೆ ಪಿಕ್ಕುತ್ತಿಲ್ಲ. ಈಗಿರತಕ್ಕ ನಿಯಮಾವಳಿ ಪ್ರಕಾರ ಇದು ಸರಿಯಿಲ್ಲ.

(೧೩) ಆರೋಗ್ಯ ಇಲಾಖೆಯಲ್ಲಿರುವ ಅಸಿಸ್ಟೆಂಟ್ ಸರ್ಜನ್‌ಗಳನ್ನು ಡೆಪ್ಯೂಟಿ ಸರ್ಜನ್‌ಗಳಾಗಿ ಭಡ್ತಿ ಕೊಡುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೆ. ಆರೋಗ್ಯ ಇಲಾಖೆಯಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ ಒಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವವರುಗಳಿಗೆ ಪ್ರೊಮೋಷನ್ ಕೊಟ್ಟು ಖಾಲಿ ಇರುವ ಡೆಪ್ಯುಟಿ ಸರ್ಜನ್‌ಗಳ ಸ್ಥಾನವನ್ನಲ್ಲಿ ನೇಮಕ ಮಾಡಬೇಕಾಗಿದೆ. ಆದರೆ ಸರ್ಕಾರ ಪ್ರೊಮೋಷನ್ ನಿಯಮಾವಳಿಯನ್ನು ಮರೆತು ನಿಧಾನಿಸುತ್ತಿರಲು ಕಾರಣವೇನು ? ಈ ರೀತಿ ಪ್ರೊಮೋಷನ್ ತಡೆ ಹಿಡಿದು ವಿಳಂಬ ಮಾಡಿದಲ್ಲಿ ಅಧಿಕಾರಿಗಳಲ್ಲಿ ಅದಕ್ಷತೆಗೆ ಅವಕಾಶ ಮಾಡಿಕೊಡುವುದಿಲ್ಲವೆ ? ಆದ್ದರಿಂದ ಈಗ ಅಸಿಸ್ಟೆಂಟ್ ಸರ್ಜನ್‌ಗಳಾಗಿ ಪ್ರೊಮೋಷನ್ ಕೊಟ್ಟು ಅಧಿಕಾರಿಗಳ ದಕ್ಷತೆ ಹೆಚ್ಚಿಸಬೇಕಾಗಿ ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಪ್ರೊಮೋಷನ್ ನೀಡುವಲ್ಲಿ ವಿಳಂಬಕ್ಕೆ ಕಾರಣ ಸಿ.ಆರ್ಸ್.